ಮಂದಹಾಸ ಮಾಯವಾಗಿಲ್ಲ. ಕಣ್ಣುಗಳಲ್ಲಿನ ತೇಜಸ್ಸು ಇಮ್ಮಡಿಯಾಗಿದೆ. ಆ ಉತ್ಸಾಹ ಮಾತುಗಳಲ್ಲೂ ಪ್ರತಿಧ್ವನಿಸುತ್ತದೆ.

ತರಬೇತಿಯ ಅವಧಿ 31 ವಾರಗಳು. ಈ ಅವಧಿಯಲ್ಲಿ ಯುವತಿಯರನ್ನು ಮಾನಸಿಕವಾಗಿ, ದೈಹಿಕವಾಗಿ ಸದೃಢಗೊಳಿಸಲಾಗುತ್ತದೆ. ಪರಿಪೂರ್ಣ ವ್ಯಕ್ತಿತ್ವ ನಿರ್ಮಾಣಕ್ಕೆ ಆದ್ಯತೆ ನೀಡಲಾಗುತ್ತದೆ. ಮೊದಲು 'ಮೂಲ ಸೇನಾ ತರಬೇತಿ' (ಬಿಎಂಟಿ) ನೀಡಿದ ನಂತರ ಎರಡನೇ ಹಂತದ ತರಬೇತಿ ನೀಡಲಾಗುತ್ತಿದೆ.

## ನಸುಕಿನಿಂದಲೇ ತರಬೇತಿ

ಸೂರ್ಯ ಉದಯಿಸುವ ಮುನ್ನವೇ, ಬೆಳಗಿನ ಜಾವ ನಾಲ್ಕು ಗಂಟೆಯಿಂದ ಇವರ ತರಬೇತಿ ಚಟುವಟಿಕೆಗಳು ಆರಂಭವಾಗುತ್ತವೆ. ವಿವಿಧ ರೈಫಲ್‌ಗಳ ಬಳಕೆ, ಕಾರ್ಯಾಚರಣೆಗಳನ್ನು ಯಾವ ರೀತಿ ಕೈಗೊಳ್ಳಬೇಕು ಮತ್ತು ವಾಹನಗಳನ್ನು ಚಲಾಯಿಸುವುದು ಹೇಗೆ ಎನ್ನುವುದೂ ಸೇರಿದಂತೆ ವಿವಿಧ ರೀತಿಯ ತರಬೇತಿ ನೀಡಲಾಗುತ್ತದೆ.

ತರಬೇತಿ ಅವಧಿ ಬಳಿಕ ಗಡಿ ಪ್ರದೇಶವೂ ಸೇರಿದಂತೆ ಸೇನೆಯ ವಿವಿಧ ಘಟಕಗಳಿಗೆ ಈ ಯುವತಿಯರನ್ನು ನಿಯೋಜಿಸಲಾಗುತ್ತದೆ.

ಅಗ್ನಿವೀರ ಯುವತಿಯಲ್ಲಿ ಆಯ್ಕೆಯಾಗಿರುವವರಲ್ಲಿ ಶೇ. 50ಕ್ಕೂ ಹೆಚ್ಚು ಯುವತಿಯರು ಪದವೀಧರರು. ಬಿ.ಎ., ಬಿ.ಕಾಂ., ಬಿ.ಎಸ್ಸಿ. ಪದವಿ ಪೂರೈಸಿದ್ದಾರೆ. ಜೊತೆಗೆ, ಬಹುತೇಕ ಯುವತಿಯರು ಎನ್‌ಸಿಸಿ 'ಸಿ' ಸರ್ಟಿಫಿಕೇಟ್ ಪೂರೈಸಿದವರು. ಇದು ತರಬೇತಿ ಪಡೆಯುವುದನ್ನು ಸುಲಭಗೊಳಿಸಿದೆ.

'ನಾನು ಸರ್ಕಾರಿ ಶಾಲೆಯಲ್ಲಿ ಓದಿದವಳು. ನಮ್ಮ ತಂದೆ ಕೃಷಿಕರು. ಅರ್ಧ ಎಕರೆ ಜಮೀನು ಇದೆ. ಸೇನೆಯಲ್ಲಿ ಉದ್ಯೋಗ ದೊರೆಯುತ್ತದೆ. ಇಲ್ಲಿ ಹತ್ತಾರು ಅವಕಾಶಗಳಿವೆ. ವಿವಿಧ ರೀತಿಯ ತರಬೇತಿಯೂ ದೊರೆಯುತ್ತದೆ. ಕ್ರೀಡೆ ಮತ್ತು ಸಾಹಸ ಕೈಗೊಳ್ಳುವ ಛಲ ಉಳ್ಳವರಿಗೆ ವೇದಿಕೆಯನ್ನು ಕಲ್ಪಿಸುತ್ತದೆ' ಎಂದು ವಿಶಾಖಪಟ್ಟಣದ ರಜನಿ ಹೇಳುತ್ತಾರೆ.

'ಎನ್‌ಸಿಸಿಯಲ್ಲಿದ್ದಾಗಲೇ ಸೇನೆ ಸೇರಲು ನಿರ್ಧರಿಸಿದ್ದೆ. ನಮ್ಮ ತಂದೆಯೂ ಕೃಷಿಕರು. ಸೇನೆ ಸೇರುವುದು ನನ್ನ ಸ್ವಂತ ನಿರ್ಧಾರವಾಗಿತ್ತು. ನಮ್ಮ ಊರಲ್ಲಿ ಯುವತಿಯರು ಯಾರೂ ಸೇನೆಗೆ ಹೋಗಿರಲಿಲ್ಲ. ಹುಡುಗಿಯರು ಸೇನೆ ಸೇರಲು ಬಯಸಿದರೆ ಜನ ಭಯ ಹುಟ್ಟಿಸುತ್ತಾರೆಯೇ ಹೊರತು ಧೈರ್ಯ ತುಂಬುವುದಿಲ್ಲ. ಹೀಗಾಗಿ, ನಾನು ಯಾರ ಸಲಹೆಯನ್ನೂ ಕೇಳಲಿಲ್ಲ' ಎಂದು ಕೇರಳದ ವಯನಾಡಿನ ಪಿ.ಡಿ. ಜೋತ್ಸ್ನಾ ತನ್ನ ಅನುಭವಗಳನ್ನು 'ಸುಧಾ'ದೊಂದಿಗೆ ಹಂಚಿಕೊಂಡರು.



ತರಬೇತಿ ಪಡೆಯುತ್ತಿರುವ 100 ಯುವತಿಯರಲ್ಲಿ ಕರ್ನಾಟಕದಿಂದ ಆಯ್ಕೆಯಾದವರು ಶ್ರೀದೇವಿ ಮಾತ್ರ. ಉಡುಪಿಯ ಕುಂದಾಪುರದ ಇವರು, ಅಧಿಕಾರಿಯಾಗಬೇಕು ಎಂಬ ಬಯಕೆಯಿಂದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆಗಳನ್ನು ನಡೆಸುತ್ತಿದ್ದರು. ಕ್ರೀಡೆಯಲ್ಲಿ ಆಸಕ್ತಿ ಹೊಂದಿದ್ದ ಅವರಿಗೆ, ಸೇನೆ ಬಗ್ಗೆ ಮೊದಲಿನಿಂದಲೂ ಒಲವಿತ್ತು. ಆ ಒಲವು ಈಗ ಕಾರ್ಯರೂಪಕ್ಕೆ ಬಂದಿದೆ. ಬಿ.ಕಾಂ. ಪದವಿ ಪಡೆದಿರುವ ಅವರಿಗೆ ತಾವು ಕಂಡಿದ್ದ ಕನಸು ನನಸಾಗಿರುವುದಕ್ಕೆ ಖುಷಿಯಿದೆ.

## ತರಬೇತಿಯಲ್ಲಿಲ್ಲ ವಿನಾಯಿತಿ

'ತರಬೇತಿಯಲ್ಲಿ ಯುವತಿಯರಿಗೆ ಯಾವುದೇ ರೀತಿಯ ವಿನಾಯಿತಿಗಳು ಇಲ್ಲ. ತರಬೇತಿಗೆ ಆಯ್ಕೆಯಾಗಿರುವ ಬಹುತೇಕ ಯುವತಿಯರು ಪದವಿ ಪಡೆದಿರುವುದರಿಂದ ಅವರ ತಿಳಿವಳಿಕೆ ಮಟ್ಟ ಮತ್ತು ತಾಂತ್ರಿಕ ಜ್ಞಾನ ಹೆಚ್ಚು. ಇವರಿಗೆ ಮಿಲಿಟರಿ ಪೊಲೀಸರ ಕರ್ತವ್ಯಗಳ ಬಗ್ಗೆ ಪಾಠ ಮಾಡಲಾಗುತ್ತದೆ' ಎಂದು ತರಬೇತಿ ನೀಡುತ್ತಿರುವ ಮೇಜರ್ ವ್ಯಾಲೆಂಟಿನಾ ಜೆ. ಡಾಮೆಲೊ ಹೇಳುತ್ತಾರೆ.

ಇಲ್ಲಿನ ಮಿಲಿಟರಿ ಪೊಲೀಸ್ ಕೇಂದ್ರದಲ್ಲಿ ತರಬೇತಿ ಪಡೆದಿದ್ದ ಯುವತಿಯರ ಮೊದಲ ತಂಡದಲ್ಲಿನ ಹಲವರು 'ವಿಶ್ವ ಶಾಂತಿ ಪಾಲನಾ ಪಡೆ'ಯಲ್ಲೂ ಭಾಗಿಯಾಗಿದ್ದಾರೆ. ಲೆಬನಾನ್, ಇಸ್ರೇಲ್ ಮುಂತಾದ ರಾಷ್ಟ್ರಗಳಲ್ಲಿ ಇವರನ್ನು ನಿಯೋಜಿಸಲಾಗಿತ್ತು.

'ಸೇನೆಯಲ್ಲಿ ಮಹಿಳೆಯರ ಸೇವೆಗೆ ದಶಕಗಳ ಇತಿಹಾಸವಿದೆ. ಲಿಂಗತಾರತಮ್ಯ ನಿವಾರಿಸುವ ನಿಟ್ಟಿನಲ್ಲಿ ಸೇನೆಯಲ್ಲಿ ಅವಕಾಶ ಕಲ್ಪಿಸಿರುವುದು ಮಹತ್ವದ ಹೆಜ್ಜೆಯಾಗಿದೆ. ಯಾವುದೇ ಕಾರ್ಯಾಚರಣೆಗೆ ಹಿಂದೇಟು ಹಾಕದೆ ಯುವತಿಯರು ಕಾರ್ಯನಿರ್ವಹಿಸುತ್ತಿದ್ದಾರೆ. ವೇತನ ಮತ್ತು ಬಡ್ತಿ ಸೇರಿದಂತೆ ಯಾವುದೇ ವಿಷಯದಲ್ಲಿ ಸೇನೆ ತಾರತಮ್ಯ ಮಾಡುತ್ತಿಲ್ಲ. ಸರಿಸಮಾನವಾದ ಅವಕಾಶಗಳನ್ನು ಕಲ್ಪಿಸಲಾಗುತ್ತಿದೆ' ಎಂದು ಮಿಲಿಟರಿ ಪೊಲೀಸ್ ಕೇಂದ್ರದ ಕಮಾಂಡಂಟ್ ಬ್ರಿಗೇಡಿಯರ್ ಜೋಶ್ ಅಬ್ರಹಾಂ ಹೇಳುತ್ತಾರೆ.

ಅಗ್ನಿವೀರರನ್ನು ನಾಲ್ಕು ವರ್ಷಗಳ ಅವಧಿಗೆ ಆಯ್ಕೆ ಮಾಡಲಾಗುತ್ತದೆ. ಇವರಲ್ಲಿನ ಶೇ. 25ರಷ್ಟು ಮಂದಿಗೆ ಮಾತ್ರ ಸಾಮರ್ಥ್ಯ ಮತ್ತು ಪ್ರತಿಭೆ ಅನುಸಾರ ಸೇನೆಯಲ್ಲಿ ಸೇವೆ ಮುಂದುವರಿಯಲು ಅವಕಾಶ ದೊರೆಯುತ್ತದೆ. ಉಳಿದವರಿಗೆ ಸಿಐಎಸ್‌ಎಫ್, ಎಸ್‌ಎಸ್‌ಸಿ ಸೇರಿದಂತೆ ಸರ್ಕಾರಿ ಉದ್ಯೋಗಗಳಲ್ಲಿಯೂ ಅವಕಾಶಗಳು ಲಭ್ಯವಾಗಲಿವೆ. ನಾಲ್ಕು ವರ್ಷಗಳ ನಂತರ ಇವರಿಗೆ ನಿಗದಿತ ಮೊತ್ತವೂ ದೊರೆಯಲಿದೆ. ಹೀಗಾಗಿ, ಸ್ವಾವಲಂಬಿಯಾಗಿ ಬದುಕು ಸಾಗಿಸಲು ಯಾವುದೇ ರೀತಿಯ ಆತಂಕ ಇಲ್ಲ ಎಂದು ಅಧಿಕಾರಿಗಳು ಹೇಳುತ್ತಾರೆ.

ಪ್ರತಿಕ್ರಿಯಿಸಿ: feedback@sudha.co.in